**O.S. 416-23 PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 27.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ R N D, ವಕೀಲರಿಂದಃ**

4. ದಾವಾ ಆಸ್ತಿ ಸಿ ಟಿ ಎಸ್ ನಂ. 136 ಬಿ ಮೂಲ ಮಾಲಿರು 1982 ರ ಮೂಲ ಭಾಡಿಗೆದಾರರ ಜೊತೆಗೆ ಒಪ್ಪಂದ ಮಾಡಿಕೊಂಡ ಬಗ್ಗೆ ವೈಯಕ್ತಿಕ ಮಾಹಿತಿ ಇಲ್ಲ ಅಂದರೆ ಸರಿಯಲ್ಲ. ನನ್ನ ಜನನ 1982 ರ ನಂತರ ಅಂದರೆ ಸರಿ. ನನ್ನ ಜನನ ದಿನಾಂಕಃ 15.08.1990 ನಿಪಿ.1 ರಲ್ಲಿ ಬರೆದ ವಿಷಯಗಳನ್ನು ಓದಿ ತಿಳಿದುಕೊಂಡಿದ್ದೇನೆ. ನಿಪಿ.1 ನ್ನು ಓದಿದ ನಂತರ ಅದರಲ್ಲಿ ಬರೆದ ಎಲ್ಲಾ ವಿಷಯಗಳು ಓದಿ ತಿಳಿದುಕೊಂಡಿದ್ದರ ಪ್ರಕಾರ ಮಾಹಿತಿ ಇದೆ. 1982 ರಲ್ಲಿ ಮೂಲ ಮಾಲಿಕರು ಹಾಗೂ ಮೂಲ ಭಾಡಿಗೆದಾರರ ನಡುವೆ ನಿಪಿ.1 ದಾಖಲಾಗುವಾಗ ಏನು ಮೌಖಿಕ ಮಾತುಕತೆ ಆಗಿದೆ ಎಂದು ವೈಯಕ್ತಿಕ ಮಾಹಿತಿ ಇಲ್ಲ ಅಂದರೆ, ಮೌಖಿಕವಾಗಿ ಅಲ್ಲ, ನಿಪಿ.1 ಲಿಖಿತವಾಗಿ ಮಾತುಕತೆಯಾಗಿದೆ. ನಿಪಿ.10 ನೋಂದಾಯಿವಲ್ಲದ ಭಾಡಿಗೆ ಪತ್ರವಾಗುವಾಗ ನಾನು ಅಲ್ಪವಯಿ ಅಂದರೆ ಸರಿ. ನಿಪಿ.10 ರಲ್ಲಿ ಏನು ಬರೆದಿದ್ದಾರೆ ಅಂತಾ ಕೇಸ ಹಾಕುವಾಗ ಹಾಗೂ ನೋಟಿಸು ಕೊಡುವಾಗ ಗೊತ್ತಾಗಿದೆ ಅಂದರೆ ಸರಿ. ನಿಪಿ.1 ರಲ್ಲಿ ಬರೆದ ಕರಗಳ ಬಗ್ಗೆ ಗೊತ್ತು. ಅಸಲು ದಾವೆ ನಂಃ 415/23 ರಲ್ಲಿರುವ ನಿಡಿ.8 ಹಾಗೂ ಈ ದಾವೆಯಲ್ಲಿರುವ ಹಾಜರಪಡಿಸಿರುವ ನಿಪಿ.5 ರಿಂದ 8 ಪೊಟೋಗಳನ್ನು ತೋರಿಸಿ, ನಿಡಿ.8 ರ ಪ್ರಕಾರ ಕಟ್ಟಡ ಕಟ್ಟಲಾಗಿದೆ ಅಂದರೆ ನನಗೆ ಗೊತ್ತಿಲ್ಲ. ಮೂಲ ಮಾಲಿಕ ನಮ್ಮ ಅಜ್ಜ ಗುರುಬಸಪ್ಪ ಗುರಪ್ಪ ಬೆಳಗಾವಿ ರವರು ಕೊಟ್ಟಿದ್ದಾರೆ. ನಿಪಿ.2 ರ ಪ್ರಕಾರ ನನಗೆ ಹಾಗೂ ವಾದಿ ನಂಃ1 ರವರಿಗೆ ಮತ್ತು ಪತ್ರದ ಪ್ರಕಾರ ಆಸ್ತಿ ಕೊಟ್ಟಿದ್ದಾರೆ ಅಂದರೆ ಸರಿ. ಮತ್ತು ಪತ್ರದ ದಿಃ 25.01.2008 ರ ಪ್ರಕಾರ ನಮ್ಮ ಅಜ್ಜ ದಿಃ 28.03.2008 ರಂದು ಮರಣ ಹೊಂದಿದ ನಂತರ ನಮಗೆ ಹಕ್ಕು ಬಂದಿದೆ ಅಂದರೆ ಸರಿ. ಮತ್ತು ಪತ್ರ ಮಾಡಿಟ್ಟ ನಂತರ ನಮ್ಮ ಅಜ್ಜ ಮರಣ ಹೊಂದುವವರೆಗೆ ಅವರೇ ಎಲ್ಲ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು ಅಂದರೆ ಸರಿ. ನಿಪಿ.1 ಹಾಗೂ 10 ನಮ್ಮ ಅಜ್ಜ ಜೀವಿತ ಕಾಲದಲ್ಲಿ ಅವರ ಮಾತಿನ ಪ್ರಕಾರ ಆಗಿದೆ ಅಂದರೆ ಸರಿ. 2008 ವರೆಗಹೂ ನಮ್ಮ ಅಜ್ಜ ಮರಣ ಹೊಂದುವವರೆಗೂ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಅಂದರೆ ಸರಿಯಲ್ಲ. ನಮ್ಮ ಅಜ್ಜ ಮತ್ತು ಪತ್ರ ಬರೆಯುವ ಕಾಲಕ್ಕೆ ಹಾಗೂ ಅವರು ಮರಣ ಹೊಂದಿದ ಕಾಲಕ್ಕೆ ನಾವು ಅಲ್ಪವಯಿಗಳು ಅಂದರೆ ಸರಿ. ನಮ್ಮ ಅಜ್ಜ ಜೀವಂತ ಇರುವಾಗ ನ್ಯಾಯಾಲಯದಲ್ಲಿರುವ ನಮ್ಮ ತಂದೆ ವ್ಯವಹಾರ ನೋಡಿಕೊಳ್ಳುತ್ತಿದ್ದರು ಅಂದರೆ ಸರಿ.

**O.S. 416-23** **PW : 1**

ನಿಪಿ.5 ರಿಂದ 8 ರಲ್ಲಿರುವ ಕಟ್ಟಡವನ್ನು ಮಹಾನಗರ ಪಾಲಿಕೆಯ ಪರವಾನಿಗೆಯ ಮೇರೆಗೆ ಕಟ್ಟಿದ್ದಾರೆ ಅಂದರೆ ಗೊತ್ತಿಲ್ಲ. ಪ್ರತಿವಾದಿ ನ್ಯಾಯಾಲಯದಲ್ಲಿ ಯಾವ ಯಾವ ದಾಖಲೆಗಳನ್ನು ಹಾಜರಪಡಿಸಿದ್ದಾರೆಂದು ನೋಡಿಕೊಂಡಿದ್ದೇನೆ. ನಮ್ಮ ಅಜ್ಜ ಮತ್ತು ಪತ್ರ ಬರೆದಿಟ್ಟಾಗ ಅವರು ಹೇಳಿದ ಪ್ರಕಾರ ದಾವಾ ಆಸ್ತಿ ಬಗ್ಗೆ ಸ್ವಲ್ಪ ಸ್ವಲ್ಪ ಗೊತ್ತು. ಅಸಲು ದಾವೆ ನಂಃ 415/23 ರ ನಿಡಿ.8 ರ ಪ್ರಕಾರ ಸಿ ಟಿ ಎಸ್ ನಂಃ 136 ಎ ಹಾಗೂ 136 ಬಿ ಗಳಲ್ಲಿ ನಿಡಿ.8 ರ ಪ್ರಕಾರ ಕಟ್ಟಡ ಕಟ್ಟಿದ್ದಾರೆ ನೋಡಿ, ಓದಲು - ಗುರುತಿಸಲಾಗುವುದಿಲ್ಲವೆಂದು ಹೇಳುತ್ತಾರೆ. ನನ್ನ ವ್ಯಾಸಂಗ ಎಂ ಬಿ ಎ ಆಗಿದೆ. ಸದರಿ ನಿಡಿ.8 ನ್ನು ಸಾಕ್ಷಿ ನೋಡಿ ಗುರುತಿಸಲು ಸಿ ಟಿ ಎಸ್ ನಂಃ 136 ಎ ಹಾಗೂ 136 ಬಿ ಅಂತಾ ಹೇಳುತ್ತಾರೆ. ನಿಡಿ.8 ರ ಪರವಾನಿಗೆ ಪ್ರಕಾರ ಕಟ್ಟಡ ಕಟ್ಟಲಾಗಿದೆ ಅಂದರೆ ಗೊತ್ತಿಲ್ಲ. ನಾನು ವಯಸ್ಸಿಗೆ ಬಂದ ನಂತರ ಮೂಲ ಭಾಡಿಗೆದಾರನಾಗಿ ಕಟ್ಟಡವನ್ನು ಪರವಾನಿಗೆ ತೆಗೆದುಕೊಂಡು ಕಟ್ಟಿದ ಬಗ್ಗೆ ನೋಟಿಸು ಕೊಟ್ಟು ದಾಖಲೆ ಕೇಳಿಲ್ಲ. ಸಿ ಟಿ ಎಸ್ ನಂಃ 136 ಎ ಹಾಗೂ 136 ಬಿ ಎರಡೂ ಸೇರಿಸಿ ಒಂದು ಕಟ್ಟಡ ಕಟ್ಟಿರಬಹುದು. ಸದರಿ ನಿಡಿ.8 ರಲ್ಲಿ ತೋರಿಸಿದಂತೆ ಒಂದೆ ಸಾರೆ ಕಟ್ಟಡ ಕಟ್ಟಿದ್ದಾರೆ. ನಿಡಿ.5 ರಿಂದ 8 ರ ಪ್ರಕಾರ ಹಾಗೂ ಸಿ ಡಿ ಪಿ -9 ಕಟ್ಟಡ ವನ್ನು ಕಟ್ಟಿದ್ದಾರೆ. ಒಳಗಡೆಗೆ ಮಾರ್ಪಾಡು ಮಾಡಿದ್ದಾರೆ. ನಿಡಿ.8 ರ ಪ್ರಕಾರ ಪೂರ್ಣ ಆಸ್ತಿ ಮೇಲೆ ಕಟ್ಟಡ ಕಟ್ಟಿಲ್ಲ. ಭಾಗಶಃ ಕಟ್ಟಡ ಕಟ್ಟಿದ್ದಾರೆ ಅಂದರೆ ಸರಿ. ನಿಪಿ.1 ಪೇಜ – 5 ರಲ್ಲಿ, ದಿನಾಂಕಃ 1.9.1991 ರಿಂದ ಮುಂದೆ ಪ್ರತಿ ತಿಂಗಳು ರೂ. 10000 ರಂತೆ ಪೂರ್ಣ 40 ವರ್ಷವಾಗುವವರೆಗೂ ಅಂದರೆ ಭಾಡೇದ 40 ವರ್ಷಗಳ ಪೈಕಿ ಉಳಿದ ಅವಧಿ ಮುಗಿಯವರೆಗೆ ಕೊಡುತ್ತಾ ಹೋಗ ಬೇಕು ಅಂತಾ ಬರೆಯಲಾಗಿದೆ ಅಂದರೆ ಸರಿ. ನಿಪಿ.1 ಪೇಜ್ ನಂಃ 3 ಪ್ಯಾರಾ ನಂಃ 3 ರಲ್ಲಿ "ಸದರ ಒಂದು ಅಂತಸ್ತಿನ ಇಮಾರತಿಯ ಮೇಲೆ ವ ಉಳಿದ ಆಸ್ತಿಯಲ್ಲಿ ಎರಡನೇ ಪಕ್ಷದವರು ತಮಗೆ ಬೇಕಾದಷ್ಟು ಮಜಲು ಅಥವಾ ಮಜುಲುಗಳ ಇಮಾರತಿ ಅಂದಾಜು 1 ಲಕ್ಷ 50 ಸಾವಿರ ರೂ. ತಮ್ಮ ಖರ್ಚಿನಿಂದ ಕಾರ್ಪೂರೇಶನ ದವರಿಂದ ಪರವಾನಿಗೆ

ಪಡೆದುಕೊಂಡು ಕಟ್ಟಿಸಿಕೊಳ್ಳಬಹುದೆಂದು ಬರೆಯಲಾಗಿದೆ ಅಂದರೆ ಸರಿ." ಮೂಲ ಭಾಡಿಗೆದಾರರು ಕಾರ್ಪೊರೇಶನ್ ರವರ ಪರವಾನಿಗೆ ಪಡೆದು ಕಟ್ಟಡ ಕಟ್ಟಿರಬಹುದು.

**O.S. 416-23** **PW : 1**

ನಿಪಿ.1 ಪೇಜ ನಂಃ 3 ಪ್ಯಾರಾ ನಂಃ 3 ರಲ್ಲಿ 1 ನೇ ಪಕ್ಷದವರು 2 ನೇ ಪಕ್ಷದವರಿಗೆ ಭಾಡೇದಿಂದ ಕೊಡಬೇಕಾದ 2 ನೇ ಪ್ಯಾರಾದಲ್ಲಿ ಕಾಣಿಸಿದ ಆಸ್ತಿಯಲ್ಲಿ ದಕ್ಷಿಣ ಕಡೆಯ ಪೂರ್ವ ದಿಕ್ಕಿನ ಪೂರ್ವ ಪಶ್ಚಿಮ ಃ 13 ಫೂಟು, ಉತ್ತರ ಃದಕ್ಷಿಣ 30 ಫೂಟು ಅಳತೆಯ ಜಾಗೆಯಲ್ಲಿ 2 ನೇ ಪಕ್ಷದವರು ಒಂದು ಮಜಲಿನ ಆರ್ ಸಿ ಸಿ ಇಮಾರತಿ ಪೂರ್ಣ ಕಟ್ಟಿಸಿ ಗ್ರೌಂಡ ಫ್ಲೋರ ವ ಅದರ ಮೇಲಿನ ಒಂದು ಅಂತಸ್ತಿನ ಪೂರ್ಣ ಇಮಾರತಿ 1 ನೇ ಪಕ್ಷದವರಿಗೆ ಉಚಿತವಾಗಿ ಏನೂ ಕ್ರಯವಿಲ್ಲದೇ ಅವುಗಳ ಪ್ರತ್ಯಕ್ಷ ಕಬಜಾ ಮಾಲ್ಕೀನಾತೆಯಿಂದ ಕೊಡಬೇಕು" ಎಂದು ಬರೆಯಲಾಗಿದೆ.

5. ಮೂಲ ಭಾಡಿಗೆದಾರ ಕಟ್ಟಡ ಕಟ್ಟಿದ ನಂತರ ಬೋರ್ಡಿಂಗ, ಲಾಡ್ಜಿಂಗ, ಹೊಟೇಲ್, ಸ್ವೀಟ್ ಮಾರ್ಟ, ಬೇಕರಿ ಹಾಗೂ ರೆಸ್ಟೂರೆಂಟ ನಡೆಸುತ್ತಾರೆ ಅಂದರೆ ಸರಿ. ಈ ವ್ಯವಹಾರಗಳನ್ನು ಪಾರ್ಟನರಶಿಪ್ ವ್ಯವಹಾರದ ಪ್ರಕಾರ ನಡೆಸಿಕೊಂಡು ಬಂದಿದ್ದಾರೆ ಅಂದರೆ ಇರಬಹುದು. ಪರಶುರಾಮ ಕಬಾಡೆ ರವರು ಪಾಲುದಾರರು ಆಗಿರಲಿಲ್ಲ. ಪರಶುರಾಮ ಕಬಾಡೆ ರವರು ಹಾಗೂ ಅವರ ಮಕ್ಕಳು ಮತ್ತು ಕುಟುಂಬದವರು ಪಾಲುದಾರರು ಇದ್ದರು ಅಂದರೆ ಗೊತ್ತಿಲ್ಲ. 2008 ವರೆಗೆ ಮೃತ್ಯು ಪತ್ರ ಬರೆದಿಡುವ ಕಾಲಕ್ಕೆ ನಮ್ಮ ಅಜ್ಜನಿಗೆ ಈ ವಿಷಯಗಳ ಬಗ್ಗೆ ಮಾಹಿತಿ ಇತ್ತು. ನಿಡಿ.8 ನಕಾಶೆ ಪ್ರಕಾರ, ಸೆಲರ್, Ground floor, I to III floor ವರೆಗೆ ಕಟ್ಟಡ ಕಟ್ಟಿದ್ದಾರೆ ಅಂದರೆ ಸರಿ. ನಿಪಿ.1 ರಲ್ಲಿ ತೋರಿಸಿದಂತೆ 13 ಇಂಟು 30 ಕಟ್ಟಡ ನಿಡಿ.8 ರಲ್ಲಿ ನಕಾಶೆಯಲ್ಲಿ Corporation ರವರು ಮಂಜೂರಾತಿ ನೀಡಿಲ್ಲ ಅಂದರೆ ಗೊತ್ತಿಲ್ಲ. ಬೋರ್ಡಿಂಗ, ಲಾಡ್ಜಿಂಗ, ಹಾಗೂ ರೆಸ್ಟೂರೆಂಟ ನಡೆಸಬೇಕಾದರೆ ಪಾರ್ಕಿಂಗ ಇದ್ದರೆ ಮಾತ್ರ ಅನುಮತಿ ಕೊಡುತ್ತಾರೆ ಅಂದರೆ ಗೊತ್ತಿಲ್ಲ. ನಿಪಿ.1 ರ ಪ್ರಕಾರ 13 ಇಂಟು 30 ಕಟ್ಟಡ ಕಟ್ಟಿಲ್ಲ ಹಾಗೂ ಕೊಟ್ಟಿಲ್ಲವೆಂದು ಮೂಲ ಭಾಡಿಗೆದಾರನಿಗೆ ನೋಟಿಸು ಕೊಟ್ಟ ಬಗ್ಗೆ ನೋಟಿಸು ಹಾಜರಪಡಿಸಿಲ್ಲ 2008 ರ ನಂತರ ನಮಗೆ ಆಸ್ತಿ ಬಂದ ನಂತರ ಮೂಲ ಭಾಡಿಗೆದಾರ ಹಾಗೂ ಮಾಲಿಕರ ನಡುವೆ ಈ ಆಸ್ತಿ ಅಳತೆ ಕೊಟ್ಟಿಲ್ಲ ಅಂತಾ ನೋಟಿಸು ಮತ್ತು ದಾಖಲೆ ಹಾಜರಪಡಿಸಿಲ್ಲ. ನಿಪಿ.1 ರಲ್ಲಿ ಅಂದಾಜು 1 ಲಕ್ಷದಾ 50 ಸಾವಿರ ರೂ. ಮೌಲ್ಯ ಮಾತ್ರ ಕಟ್ಟಡ ಕಟ್ಟಬೇಕು ಹೆಚ್ಚು ಕಟ್ಟಡ ಕಟ್ಟಬೇಡಿರಿ ಅಂತಾ ನಮ್ಮ ಅಜ್ಜ ನೋಟಿಸು ಕೊಟ್ಟಿಲ್ಲ. ನಿಪಿ.1 ರಲ್ಲಿ ಬರೆದ ಪ್ರಕಾರ ಭಾಡಿಗೆ ಪತ್ರ ನೋಂದವಾದ ನಂತರ ಅದರ ಸಂಪೂರ್ಣ ಕೆಲಸ ಮುಗಿದ ಹಾಗೆ. ನಿಪಿ.1 ರಲ್ಲಿ 13 ಇಂಟು 30 ಕಟ್ಟಡ ಕಟ್ಟಿ ಕೊಡುವುದು ಇತ್ತು. ಅದನ್ನು ಕಟ್ಟಿಕೊಡಿರಿ ಅಂತಾ ಇನ್ನೊಂದು ನೋಟಿಸು ಕೊಟ್ಟಿಲ್ಲ.

**O.S. 416-23 PW : 1**

ಸಿ ಟಿ ಎಸ್ ನಂಃ 136 ಬಿ ರಲ್ಲಿ ಪಾರ್ಕಿಂಗ ವ್ಯವಸ್ಥೆ ಮಾಡದೆ ಇದ್ದರೆ ಸದರಿ ಮೇಲ್ಕಾಣಿಸಿದ ವ್ಯವಹಾರಗಳನ್ನು ಮಾಡಲು ಆಗುತ್ತಿರಲಿಲ್ಲ ಅಂದರೆ ಗೊತ್ತಿಲ್ಲ. ನಿಪಿ.1 ರಲ್ಲಿ ಕಟ್ಟಡ ಪರವಾನಿಗೆ ಮಂಜೂರಾತಿ ಪ್ರಕಾರ ಕಟ್ಟಡಬೇಕೆಂದು ಬರೆಯಲಾಗಿದೆ ಅಂದರೆ ಸರಿ. ಪಾರ್ಕಿಂಗ ವ್ಯವಸ್ಥೆ ಮಾಡುವ ಸಲುವಾಗಿ 13 ಇಂಟು 30 ಅಳತೆಯ ಕಟ್ಟಡ ಕಟ್ಟಿಲ್ಲ, ಅದರ ಪ್ರಕಾರ ಉಭಯ ಪಕ್ಷಗಾರರು ಮೌಖಿಕವಾಗಿ ಮಾತುಕತೆ ಪ್ರಕಾರ ಈಗಿನ ಕಟ್ಟಡ ಕಟ್ಟಿದ್ದಾರೆ ಅಂದರೆ ಸರಿಯಲ್ಲ. ಈ ಎಲ್ಲ ವಿಷಯಗಳು ನಾನು ಜನಿಸುವದಕ್ಕಿಂತ ಮುಂಚೆನವು ಅಂದರೆ ಸರಿ. ನಮ್ಮ ಅಜ್ಜ ಈ ಕುರಿತು ಹೇಳಿದ ಬಗ್ಗೆ ಟಿಪ್ಪಣಿ ಮಾಡಿ ಹಾಜರಪಡಿಸಿಲ್ಲ. 2008 ರಲ್ಲಿ ನಾವು ಅಲ್ಪವಯಿಗಳು ಅಂದರೆ ಸರಿ. ನಮ್ಮ ಅಜ್ಜ ನಮ್ಮ ತಂದೆ ಬದಲಾಗಿ ನಮ್ಮ ಹೆಸರಿನಲ್ಲಿ ಮೃತ್ಯು ಪತ್ರ ಬರೆದ ಬಗ್ಗೆ ಎಲ್ಲ ವಿಷಯ ನನ್ನ ತಂದೆಗೆ ಗೊತ್ತಿರಬಹುದು. ನಾನು ಹಾಗೂ ವಾದಿ ನಂಃ 1 ವಯಸ್ಕರರಾದ ನಂತರ ಮೂಲ ಭಾಡಿಗೆದಾರನಿಗೆ ನಾವು ಮಾಲಿಕರೆಂದು ನೋಟಿಸು ಕೊಟ್ಟಿಲ್ಲ. ನಿಪಿ.1 ರ ಪ್ರಕಾರ 13 ಇಂಟು 30 ಜಾಗೆಯನ್ನು ಕಟ್ಟಡ ಪರವಾನಿಗೆ ಪ್ರಕಾರ ಮೂಲ ಭಾಡಿಗೆದಾರ ಕಟ್ಟಿಲ್ಲ ಹಾಗೂ ಮೂಲ ಮಾಲಿಕರಿಗೆ ಕೊಟ್ಟಿಲ್ಲ ಅಂದರೆ, ಕಟ್ಟಡ ಕಟ್ಟುವದಕ್ಕಿಂತ ಮುಂಚೆ ಮತ್ತೊಂದು ದಾಖಲೆಯನ್ನು ಮಾಡಿಕೊಂಡಿದ್ದಾರೆಂದು ಹೇಳುತ್ತಾರೆ. ನಿಪಿ.1 ರ ಪ್ರಕಾರ ಇವತ್ತಿನವರೆಗೂ 13 ಇಂಟು 30 ಕಟ್ಟಡವನ್ನು ನೆಲ ಸಮ ಹಾಗೂ 1 ನೇ ಅಂತಸ್ತಿನಲ್ಲಿ ಕಟ್ಟಿಲ್ಲ ಹಾಗೂ ಕೊಟ್ಟಿಲ್ಲ ಅಂದರೆ, ಸ್ಲ್ಯಾಬು ಇದೆ, ಆದರೆ ಮಾರ್ಪಾಡು ಮಾಡಿಕೊಂಡಿದ್ದಾರೆಂದು ಹೇಳುತ್ತಾರೆ.

6. ನಿಪಿ.5 ಹಾಗೂ 7 ರಲ್ಲಿ 13 ಇಂಟು 30 ಕಟ್ಟಡ ಕಟ್ಟಿ ನಮ್ಮ ಅಜ್ಜನಿಗೆ ಕೊಟ್ಟ ಬಗ್ಗೆ ದಾಖಲೆ ಹಾಜರಪಡಿಸಿಲ್ಲ. ಮೃತ್ಯು ಪತ್ರದ ಆಧಾರದ ಮೇಲೆ ನ್ಯಾಯಾಲಯದಲ್ಲಿ ಪ್ರಕರಣ ದಾಖಲ್ ಮಾಡಿ ಡಿಕ್ರಿ ಪಡೆದಿಲ್ಲ. ನಿಡಿ.8 ನೀಲ ನಕಾಶೆ ರಲ್ಲಿ ಪೂರ್ಣ ಪ್ರಮಾಣದ ಕಟ್ಟಡ ಕಟ್ಟಿಲ್ಲ ಅಂದರೆ ಸರಿ. ಸಿ ಟಿ ಎಸ್ ನಂಃ 136 ಬಿ ರಲ್ಲಿ ನಮ್ಮ ಅಜ್ಜ ಪ್ರತ್ಯೇಕ ಕಟ್ಟಡ ಕಟ್ಟಬೇಕೆಂದು ನೋಟಿಸು ಕೊಟ್ಟ ಬಗ್ಗೆ ದಾಖಲೆ ಹಾಜರಪಡಿಸಿಲ್ಲ. ಸಿ ಟಿ ಎಸ್ ನಂಃ 136 ಎ ಹಾಗೂ ಬಿ ಗಳಲ್ಲಿ ಎರಡು ಕಟ್ಟಡ ಕೂಡಿಸಿ ಕಟ್ಟಿದರೆ, ಆಸ್ತಿ ಭಾಡಿಗೆ ಬಿಡುವ ಕಾಲಕ್ಕೆ ತೊಂದರೆಯಾಗುತ್ತದೆ ಅಂತಾ ನೋಟಿಸು ಕೊಟ್ಟಿಲ್ಲ. ಸಿ ಟಿ ಎಸ್ ನಂಃ 136 ಬಿ ರಲ್ಲಿ ನಿಪಿ.1 ರ ಪ್ರಕಾರ ಕಟ್ಟಡಕಟ್ಟಿಲ್ಲವೆಂದು ಹಾಗೂ ಕಟ್ಟಡವನ್ನು ಮುಂದುವರೆಸಬಾರದೆಂದು ನಮ್ಮ ಅಜ್ಜ, ತಂದೆ -ಕುಟುಂಬದವರು ನೋಟಿಸು ಕೊಟ್ಟಿಲ್ಲ.

**O.S. 416-23 PW : 1**

ನಿಪಿ.1 ಪೇಜ ನಂಃ 3 ಪ್ಯಾರಾ ನಂಃ 3 ರಲ್ಲಿ 13 ಇಂಟು 30 ಕಟ್ಟಡವನ್ನು ನೆಲ ಸಮ ಹಾಗೂ 1 ನೇ ಅಂತಸ್ಸಿನಲ್ಲಿ ಕಟ್ಟಡ ಕಟ್ಟಿಸಬೇಕೆಂದು ಇದೆ ಅಂದರೆ ಸರಿ. ಅಸಲು ದಾವೆ ನಂಃ 415/23 ರಲ್ಲಿರುವ ನಿಡಿ.9 ಫೋಟೋದಲ್ಲಿ 4 ಅಡಿ ಎತ್ತರದಲ್ಲಿ ಕಟ್ಟಡ ಕಟ್ಟಿರಬಹುದು. ನಿಪಿ.5 ಹಾಗೂ 7 ರಲ್ಲಿರುವ ಕಟ್ಟಡವನ್ನು ಕಟ್ಟಲು ಮೂಲ ಭಾಡಿಗೆದಾರ 4 ಕೋಟಿ ರೂ. ವೆಚ್ಚ ಮಾಡಿದ್ದಾನೆ ಅಂದರೆ ಗೊತ್ತಿಲ್ಲ. ನಿಪಿ.1 ರ ಪ್ರಕಾರ 1 ಲಕ್ಷ 50 ಸಾವಿರ ರೂ. ಕಟ್ಟಡ ಕಟ್ಟಬೇಕೆಂದು, ಹೆಚ್ಚಿಗೆ ಹಣ ಹಾಕಿ ಕಟ್ಟಿದರೆ ಬಿಡಿಸಬೇಕಾದರೆ ತೊಂದರೆಯಾಗುತ್ತದೆ ಅಂತಾ ನೋಟಿಸು ಕೊಟ್ಟಿಲ್ಲ. ನಿಪಿ.1, ಪೇಜ ನಂಃ 3 ಹಾಗೂ ಪ್ಯಾರಾ ನಂಃ 3 ರಲ್ಲಿ 2 ನೇ ಪಕ್ಷದವರಿಗೆ 1 ನೇ ಪಕ್ಷದವರಿಂದ ಸದರಿ ಪರವಾನಿಗೆ ಕುರಿತು ಸಹಿ ಸೂತ್ರ ಬೇಕಾದಲ್ಲಿ ಅವುಗಳನ್ನು 1 ನೇ ಪಕ್ಷದವರು ಮಾಡಿ , 2 ನೇ ಪಕ್ಷದವರಿಗೆ ಅನುಕೂಲ ಮಾಡಿಕೊಡಬೇಕೆಂದು ಬರೆಯಲಾಗಿದೆ ಅಂದರೆ ಸರಿ. ಒಂದ ಭಾಡಿಗೆ ಪತ್ರ ನೋಂದಾವಣೆಯಾದ ನಂತರ ಮತ್ತೊಂದು ಭಾಡಿಗೆ ಪತ್ರವಾಗಬೇಕಾದರೆ ನೋಂದಣಿಯಾಗಲು ಅವಶ್ಯಕತೆ ಇರಬಹುದು. ನಿಪಿ.1, ಪೇಜ ನಂಃ 1, ಪ್ಯಾರಾ ನಂಃ 8 ರಲ್ಲಿ ಸದರ ಭಾಡೇದ ಕರಾರು ಸದರಿ ಆಸ್ತಿಗಳಲ್ಲಿಯ ಅಂದರೆ ಮೇಲ್ಕಾಣಿಸಿದ ದಕ್ಷಿಣಕ್ಕಿರುವ ಪೂರ್ವ ಕಡೆಯ ಗ್ರೌಂಡ ಫ್ಲೋರ ವ ಅದರ ಮೇಲಿನ ಒಂದು ಮಜಲಿನ ಅಂಗಡಿ ಆಸ್ತಿ ಬಿಟ್ಟು ಉಳಿದ ಯಾವತ್ತೂ ಆಸ್ತಿಗಳ ಅಂದರೆ ಯಾವತ್ತೂ ಮಜಲುಗಳ ಆಸ್ತಿಗಳ ಕುರಿತು ಮಾತ್ರ ಇರುತ್ತದೆ ಅಂತಾ ಬರೆಯಲಾಗಿದೆ ಅಂದರೆ ಸರಿ. ಅದೇ ಪ್ರಕಾರ ಮುಂದುವರೆದು ಮೇಲ್ಕಾಣಿಸಿದ 1 ನೇ ಪಕ್ಷದವರಿಗೆ ಕೊಡಬೇಕಾದ ಒಂದು ಅಂತಸ್ತಿನ ಆಸ್ತಿಗೆ ಸಂಬಂಧವಿರುವುದಿಲ್ಲ ಮತ್ತು ಸದರ ಒಂದು ಅಂತಸ್ತಿನ ಆಸ್ತಿಯೂ ಒಂದನೇ ಪಕ್ಷದವರ ಮಾಲ್ಕಿ ವಹಿವಾಟಿಯಲ್ಲಿದ್ದು ಅದನ್ನು 1 ನೇ ಪಕ್ಷದವರು ತಮಗೆ ಯೋಗ್ಯ ಕಂಡ ರೀತಿಯಲ್ಲಿ ವಹಿವಾಟ ಉಪಭೋಗ ಮಾಡಬಹುದು ಎಂದು ಬರೆಯಲಾಗಿದೆ ಅಂದರೆ ಸರಿ.

**ಮುಂದಿನ ಪಾಟೀ ಸವಾಲಿಗೆ ಪ್ರಕರಣ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.